ಸವಣೂರು ನಗರದಲ್ಲಿ ಬಸ್‌ಡಿಪೋ ಸ್ಥಾಪನೆ

513 (823). ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸವಣೂರು ನಗರದಲ್ಲಿ ರೆವಿನ್ಯೂ ಸಬ್ ಡಿವಿಜನ್ ಕೇಂದ್ರವಿದ್ದು ಅಲ್ಲಿ ಬಸ್‌ಡಿಪೋವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೇ?

ಆ) ಪಾಗಿದ್ದಲ್ಲಿ ಇನ್ನು ಎಷ್ಟು ಅವಧಿಯಲ್ಲಿ ಬಸ್‌ಡಿಪೋವನ್ನು ಅಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು.

ಆ) ಭೂಮಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ. ಭೂಮಿ ಪಡೆದ ನಂತರ ಡಿಪೋ ಕಾರ್ಯ ಪ್ರಾರಂಭಿಸಲಾಗುವುದು.

ಶಿಗ್ಗಾಂವ್ ನಗರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿ ಬಸ್ ಸ್ಟಾಂಡ್ ನಿರ್ಮಾಣ

514 (824). ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿಗ್ಗಾಂವ್ ನಗರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಸದರಿ ಬಸ್ ನಿಲ್ದಾಣದ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಗಮನದಲ್ಲಿದೆ.

ಆ) ಬಸ್ ನಿಲ್ದಾಣ ನಿರ್ಮಿಸಲು ನಿವೇಶನ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಭೂಸ್ವಾಧೀನವಾದ ನಂತರ ಬಸ್ ನಿಲ್ದಾಣದ ಕಾಮಗಾರಿಯನ್ನು ತಕ್ಷಣವೇ ಕೈಗೊಳ್ಳಲಾಗುವುದು.

ರಾಜ್ಯದಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ

515 (721). ಶ್ರೀ ಬಿ. ಹೊಂಪಣ್ಣಗೌಡ (ಸಿಂಧನೂರು).- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆಯೆಷ್ಟು ಅವುಗಳನ್ನು ಯಾವ ಯಾವ ವರ್ಗಗಳವರಿಗೆ ನೀಡಲಾಗಿದೆ (ಜಿಲ್ಲಾ ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿರುವ ಪಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ರಾಜ್ಯದಲ್ಲಿ ಡಿಸೆಂಬರ್ 91ರ ಅಂತ್ಯಕ್ಕೆ ಒಟ್ಟು 31,14,608 ಹಸಿರು ಪಡಿತರ ಚೀಟಿದಾರರು ಇರುತ್ತಾರೆ. ಈ ಕೆಳಕಂಡ ವರ್ಗದವರಿಗೆ ಹಸಿರು ಪಡಿತರ ಚೀಟಿಗಳನ್ನು ನೀಡಿದೆ.

1) ಪರಿಶಿಷ್ಟ ಜಾತಿ.
2) ಪರಿಶಿಷ್ಟ ಪಂಗಡ.
3) ಭೂರಹಿತ ಕೃಷಿ ಕಾರ್ಮಿಕರು.
4) ಹಳ್ಳಿಯ ಕುಶಲಕರ್ಮಿಗಳು
5) ಸಣ್ಣ ಮತ್ತು ಅತಿಸಣ್ಣ ರೈತರು.
6) ಸರ್ಕಾರದಿಂದ ವಿಶ್ರಾಂತಿ ವೇತನ ಪಡೆಯುವ ವೃದ್ಧಾಪ್ಯ ವೇತನದಾರರು, ಅಂಗವಿಕಲರು ಮತ್ತು ವಿಧವೆಯರು.
7) ಗ್ರಾಮಾಂತರ ಕಾರ್ಮಿಕರಾದ ಕೇಬ್ಲ್ ಕಟ್ಟುವವರು.
8) ಪ್ಲಾಂಟೇಷನ್ ಕಾರ್ಮಿಕರು.
9) ಬೀಡಿ ಸುತ್ತುವವರು ಮತ್ತು ಅಗರ್‌ಬತ್ತಿ ತಯಾರಕರು.
10) ಹಾಗೂ ಕುಟುಂಬದ ವಾರ್ಷಿಕ ಆದಾಯ ೩,೫೦೦೦೦ ಗಳಿಗಿಂತ ಕಡಿಮೆ ಇರುವ ಎಲ್ಲಾ ಜನರು ಈ ಮಿತಿಯನ್ನು ಈಗ ೬೪೦೦:- ಕ್ಕೆ ಹೆಚ್ಚಿಸಿದೆ.
(ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲದ ಇರುವುದರಿಂದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಲಾಗಿದೆ.)

ಅ) 31,14,608

ಅನುಬಂಧ 'ಅ'

1991 ನೇ ಡಿಸೆಂಬರ್ ತಿಂಗಳಲ್ಲಿದ್ದಂತೆ ಜಿಲ್ಲಾವಾರು ಹಸಿರು ಪಡಿತರ ಚೀಟಿಗಳ ವಿವರ ತಿಳಿಸಿ

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು
1.	ಬೆಂಗಳೂರು (ಆಸಹಕಾರಿಕ ಪಡಿತರ)	–
2.	ಬೆಂಗಳೂರು ನಗರ	75936
3	ಬೆಂಗಳೂರು ಗ್ರಾಮಾಂತರ	143608
4.	ಬೆಳಗಾಂ	203895
5.	ಬಳ್ಳಾರಿ	118992
6.	ಬೀದರ್	83511
7.	ಬಿಜಾಪುರ	198479
8.	ಚಿಕ್ಕಮಗಳೂರು	104040
9.	ಚಿತ್ರದುರ್ಗ	168993
10.	ದಕ್ಷಿಣ ಕನ್ನಡ	128755
11.	ಧಾರವಾಡ	257120
12.	ಗುಲ್ಬರ್ಗ	208013
13.	ಹಾಸನ	134143
14.	ಕೊಡಗು	55484
15.	ಕೋಲಾರ	191654
16.	ಮಂಡ್ಯ	152536
17.	ಮೈಸೂರು	249004
18.	ರಾಯಚೂರು	173978
19.	ಶಿವಮೊಗ್ಗ	140777
20.	ತುಮಕೂರು	223671
21.	ಉತ್ತರ ಕನ್ನಡ	102919
	ಒಟ್ಟು :	3114608